ಅವಳು ಆಕ್ರಂದಿಸುತ್ತ ಅಳಲಾರಂಭಿಸಿದಳು. ನಾನು ಅವಳ ಬಳಿಗೆ ಹೋಗಬೇಕಿತ್ತು, ಅವಳನ್ನು ತಬ್ಬಿ ಹಿಡಿಯಬೇಕಿತ್ತು. ಅವಳ ಬತ್ತಲೆ ಮೈಯನ್ನು ನನ್ನ ದೇಹದಿಂದ ಮುಚ್ಚಬೇಕಿತ್ತು. ನಾನವಳ ತಲೆಗೂದಲ ಮೇಲೆ ಕೈಯಾಡಿಸಬಹುದಿತ್ತು. ಕಣ್ಣೊಳಗಿನ ಕಂಬನಿಯನ್ನು ಕುಡಿದುಬಿಡಬಹುದಾಗಿತ್ತು. ನಾನು ನಿಂತಲ್ಲಿಂದ ಅಲುಗಾಡಲಿಲ್ಲ. ಅತ್ತ ಇತ್ತ ಹಾರಿದ ನನ್ನ ಸಾವಿರಾರು ತುಣುಕುಗಳನ್ನು ಕೂಡಿಸುವುದು ಸಾಧ್ಯವಾಗದೇ ಹೋಯಿತು. ಮುಂದೇನಾಯಿತೋ ನೆನಪಾಗುತ್ತಿಲ್ಲ. ನನ್ನ ಕಿರಿಯ ಮಗ ಬಾಣದಂತೆ ಮನೆಯಿಂದ ದೂರ ಹೋಗಿದ್ದು ಮಾತ್ರ ನೆನಪಾಗುತ್ತಿದೆ. ಅದೇ ರಾತ್ರಿ ಪಾರೂ ಬಾವಿಯೊಳಗೆ ಹಾರಿ ಪ್ರಾಣ ಬಿಟ್ಟಳು. ತೀರ ಆಳವಾಗಿದೆ ಬಾವಿ. ಕತ್ತಲೆಯಿಂದ ಕೂಡಿದ ಹಿಮದಂಥ ನೀರು. ಕಲ್ಲಿನಿಂದ ಕಟ್ಟಿದ್ದು. ಅದೇ ನನ್ನ ಕನಸಿನಲ್ಲಿ ಬರುತ್ತಿರಬಹುದೇ? ಹೌದು. ಅದೇ ಆ ಬಾವಿ. ನಾನು ಕೆಳಗಿಳಿದು ಏನು ಹುಡುಕುತ್ತಿರುತ್ತೇನೆ? ನನ್ನ ಪಾರೂನ ದೇಹವೇ? ಅಲ್ಲ. ನಾನು ನನ್ನ ಕಿರಿಯ ಮಗನನ್ನು ಹುಡುಕುತ್ತಿದ್ದೇನೆ. ಅವನ ಶಾಂತ ಚಹರೆಯನ್ನು ನಾನೆಂದೂ ನೋಡಲಿಲ್ಲ. ಸದಾಕಾಲ ಹೊರಗೆ ಉಳಿದ. ಆಗೀಗ ಮನೆಗೆ ಬಂದರೂ ಕೋಪದಿಂದ ಉರಿಯುತ್ತ ಇರುತ್ತಿದ್ದ. ಕೆಟ್ಟದಾಗಿ ಬಯ್ಯುತ್ತಿದ್ದ. ಅವನನ್ನು ಬಹಳ ಪ್ರೀತಿಸಬೇಕೆಂದೆನಿಸುತ್ತಿತ್ತು. ತೊಡೆಯ ಮೇಲೆ ಕೂರಿಸಿಕೊಳ್ಳಬೇಕೆನಿಸುತ್ತಿತ್ತು. ಆದರೆ, ಅವನ ನೋಟದ ಭಯವಾಗುತ್ತಿತ್ತು. ಹಾಗವನು ನೋಡುತ್ತ ಇರುತ್ತಿದ್ದ. ಮಾರಾಯಾ, ಹಾಗೆಲ್ಲ ನೋಡಬೇಡವೋ, ಅದಕ್ಕಿಂತ ನನ್ನನ್ನು ಬೇಕಾದರೆ ಕೊಂದು ಬಿಡು. ಆದರೆ, ಬಾವಿಯ ದಂಡೆಯಲ್ಲಿ ಕಿರುಚುತ್ತ ನಿಂತಿದ್ದ ನನ್ನ ಇಬ್ಬರೂ ಹಿರಿಯ ಮಕ್ಕಳು ಖಡ್ಗದಿಂದ ಅವನನ್ನು ತುಂಡು ತುಂಡು ಮಾಡಿ ಕೊಚ್ಚಿ ಹಾಕಿ ಬಾವಿಗೆ ಎಸೆದಿದ್ದಾರೆ. ನಾನದನ್ನು ಹುಡುಕುತಲಿದ್ದೇನೆ. ನಾನು ಆ ತುಣುಕುಗಳನ್ನು ಕೂಡಿಸಿ ಹೊಲಿದು ಜೀವಂತ ಮಾಡಲಿದ್ದೇನೆ ಎಂಬಂತೆ. ನಾನು ಕನಸಿಗೆ ಹೆದರುವುದಿಲ್ಲ. ಕನಸಿನ ಅರ್ಥಕ್ಕೆ ಹೆದರುತ್ತೇನೆ.

ಈ ಘಟನೆಯ ಬಳಿಕ ಅಪ್ಪ ಒಮ್ಮೆ ಬಳಿಗೆ ಬಂದ. ನನ್ನ ತಲೆಯ ಮೇಲೆ ಕೈಯಿಟ್ಟು ಹೇಳಿದ: 'ರೋ ಮತ್. ನಮ್ಮ ದಂಧೆಯಲ್ಲಿದು ಹಳೆಯ ಪದ್ಧತಿ. ಪ್ರೇಮ, ಆತ್ಮ ಸನ್ಮಾನವನ್ನು ಬೇರು ಸಹಿತ ಕಿತ್ತೆಸೆಯಲೆಂದು ಅದು ಜನಿಸಿದೆ.' ನಾನು ಎದ್ದು ಮೌನವಾಗಿ ಅಂಗಡಿಯತ್ತ ಹೊರಟೆ. ಅದಾದ ಅನಂತರ ನಾನೆಂದೂ ಡಬ್ಬಿಯನ್ನು ತೆರೆದು ನೋಡಲಿಲ್ಲ. ಇಷ್ಟು ವರ್ಷಗಳ ಬಳಿಕ ಮರ್ ಗಯಾ ಹೋಗಾ ವೋ ಸಾಲಾ ಕೀಡಾ. ಸತ್ಯ ಹೇಳುತ್ತೇನೆ, ಅದನ್ನು ನೋಡುವ ಮನಸ್ಸಾಗಲಿಲ್ಲ. ಒಂದು ಯಂತ್ರದಂತೆ ಕೆಲಸ ಮಾಡುತ್ತಿದ್ದೆ. ಬಳಿಕ ಮೌನವಾಗಿ ಕುಳಿತಿರುತ್ತಿದ್ದೆ. ನನಗೂ ಜಗತ್ತಿಗೂ ಸಂಬಂಧವಿರಲಿಲ್ಲ. ಜನರು ಜೀವಂತವಾಗಿರುವರೇ ಅಥವಾ ಸತ್ತಿರುವರೇ ಒಂದೂ ನನಗೆ ಸಂಬಂಧವಿರಲಿಲ್ಲ. ನನ್ನ ಪಾರೂ ಸತ್ತಳು. ಜಗತ್ತು ನನ್ನ ಪಾಲಿಗೆ ಸತ್ತಿತ್ತು. ಅವಳು ಡಬ್ಬಿಯೊಳಗೆ ಮುಚ್ಚಿಟ್ಟ ಕೀಟ ಸಹ ಉಸಿರುಗಟ್ಟಿ ಸತ್ತಿರಬೇಕು. ಮುಚ್ಚಿದ ಸ್ಥಳದಲ್ಲಿ ಇಷ್ಟು ವರುಷ ಯಾರಾದರೂ ಜೀವಂತವಾಗಿರುತ್ತಾರೆಯೇ? ಒಮ್ಮೊಮ್ಮೆ ನಾನೂ ಜೀವಂತವಾಗಿಲ್ಲ ಎಂದೇ ಅನಿಸುತ್ತದೆ. ಮಧ್ಯಾಹ್ನವಾಗುತ್ತದೆ. ಉಸಿರು ನಿಲ್ಲುತ್ತದೆ. ಹೆಣದಂತೆ ಬಿದ್ದುಕೊಂಡಿರುತ್ತೇನೆ. ನಾನು ಮಲಗಿದ್ದೇನೆ ಎಂದೆನಿಸುತ್ತದೆ. ಆದರೆ, ನಿದ್ದೆ ಬರುವುದಿಲ್ಲ. ಕಣ್ಣು ತೆರೆದಿರುವ ಹೆಣ ನಾನು.

ಕೊನೆಗೂ ಕನಸಿನ ಅರ್ಥ ಸತ್ಯವಾಗುವ ಸಮಯ ಬಂತು. ಎಲ್ಲೈ ನಾಲಾಯಕರೆ, ಕೊಂದು ಹಾಕಿದರಲ್ಲ ನನ್ನ ಮಗನನ್ನು? ಸೇಡು ತೀರಿಸಿಕೊಂಡಿರಲ್ಲ? ಈಗ ಹೊರಡಿ, ರಾಜ್ಯವಾಳಿ. ಇದನ್ನೇ ಹೇಳಲು ಅಪ್ಪನಿಗೆ ಫೋನ್ ಮಾಡುತ್ತಿರಲ್ಲ? ಗೊತ್ತಾಗಿದೆ ನನಗೆ. 'ಹೋಗಿ ಸಾಯಿ. ಏನಂದೆ? ಮತ್ತೊಮ್ಮೆ ಹೇಳು. ಹಲೋ ಹಲೋ ಸಿಗಲಿಲ್ಲವೇ? ಕೊಲ್ಲಲು ಹೋದಿರಿ, ಅವನು ಅಲ್ಲಿ ಇರಲೇ ಇಲ್ಲವೇ? ಭಾಗ್ ಗಯಾ? ಹೋಗಲಿ ಬಿಡು ಬೇಟಾ. ಒಳ್ಳೆಯದಾಯಿತು. ನಿನ್ನ ಕೈಯಿಂದ ತಮ್ಮನ ಕೊನೆಯಾಗಲಿಲ್ಲ. ಅವನು ತನ್ನ ಕರ್ಮದಿಂದ ಸಾಯಬಹುದು. ಶಾಂತವಾಗಿರು ಮತ್ತು ಆರಾಮ